# ಆಹಾ ಸುದ್ದಿ!





ಜರ್ಮನಿಯಲ್ಲಿ ವರ್ಷಕ್ಕೊಮ್ಮೆ 'ಸುಂದರಿ ಹಸು' ಸ್ಪರ್ಧೆ ನಡೆಯುತ್ತದಂತೆ. ಮಿಸ್ ಅಂತ ಹೇಳೋಕಾಗಲ್ಲ, ಮಿಸೆಸ್ ಜರ್ಮನಿ ಅಂತಲೂ ಹೇಳಲು ಸಾಧ್ಯವಿಲ್ಲ, ಹಸು ಕರು ಹಾಕಿದ ಮೇಲೆ ಅದರ ಸೌಂದರ್ಯವನ್ನು ಅಳತೆ ಮಾಡುತ್ತಾರಂತೆ. 'ಕೌ'ವಾಕ್ ಕೂಡಾ ಇರಬಹುದು. ಆದರೆ ಪ್ರಶಸ್ತಿ ಗೆದ್ದ ಹಸು ಬಾಯಿ ಮುಚ್ಚಿಕೊಂಡು ಕೊಡುವ ಪೋಸ್ ಅನ್ನು ಹಸುವಿನ ಮಾಲೀಕ ಮಾಡಬಹುದು.



ಪೂರ್ವ ಜರ್ಮನಿಯ ಈ ಮನೆಯ ಕಿಟಕಿಯಿಂದ ಕಾರೊಂದು ಅರ್ಧ ಹೊರಗೆ ಬಂದು ನಿಂತಿದ್ದು ಯಾಕೆ ಎಂದು ಹಲವರು ತಲೆ ಕೆಡಿಸಿಕೊಂಡರಂತೆ. ಮನೆಗೆ ಬೆಂಕಿ ಬಿದ್ದಾಗ ತಪ್ಪಿಸಿಕೊಳ್ಳುವುದು ಹೇಗೆ ಎಂದು ಅಗ್ನಿಶಾಮಕ ದಳದವರು ತರಬೇತಿ ಪಡೆಯಲು ಈ ವಿಚಿತ್ರ ಆದರೂ ನಿಜ ದೃಶ್ಯವನ್ನು ಸೃಷ್ಟಿಸಿಕೊಂಡಿದ್ದಂತೆ. ಬೆಂಕಿ ಬಿದ್ದಾಗ ಕಾರನ್ನು ಕಿಟಕಿಗೆ ತೂರಿಸುವ ಕೆಲಸ ಆದ್ಯತೆ ಮೇಲೆ ಮಾಡಬೇಕು ಎಂದು ತರಬೇತಿ ಪಡೆಯುವವರು ಕಲಿತುಕೊಂಡಿರಬಹುದು.

'ದಿಲ್ ನೆ ಯೆ ಕಹಾ ಹೈ ದಿಲ್ ಸೆ..', 'ಬರಸ್ ಜಾ..' 'ದಿಲ್ ಕಾ ಕರಾರ್ ಲೂಟ್ನೆ..'– ಇವೆಲ್ಲಾ ಶಿಲ್ಪಾ ಶೆಟ್ಟಿಯ ಸಿನಿಮಾದ ಹಾಡುಗಳು ಎಂದು ಆಕೆಯ ಅಭಿಮಾನಿಗಳು ಥಟ್ ಅಂತ ಹೇಳಿಯಾರು. ಆದರೆ ಕ್ಯಾಲಿಫೋರ್ನಿಯಾದ ಗೂಗ್ಲ್ ಕಂಪೆನಿ ಮುಖ್ಯ ಕಚೇರಿಯ ಆವರಣದಲ್ಲಿರುವ ಹೋಟೆಲ್‌ನಲ್ಲಿ ಈ ಹೆಸರಿನ ತಿನಿಸುಗಳು ಲಭ್ಯ ಇವೆಯಂತೆ. ಹಾಡು ಹಾಗೂ ತಿನಿಸಿನ ಜುಗಲ್‌ಬಂದಿ ಜೋರಾಗೇ ಇರಬಹುದು.



ಸ್ಪೇನಿನಲ್ಲಿ ಗೂಳಿ ಕಾಳಗದಂತೆ ಈ ಹಿಟ್ಟಿನ ಕಾಳಗವೂ ಖ್ಯಾತಿ ಪಡೆದಿದೆ. ಒಂದೇ ವ್ಯತ್ಯಾಸವೆಂದರೆ ಹಿಟ್ಟಿನ ಕಾಳಗದಲ್ಲಿ ಪಾಲ್ಗೊಳ್ಳುವವರು ಇಡೀ ದೇಹಕ್ಕೆ, ಮುಖಕ್ಕೆ ರಕ್ಷಣಾ ಕವಚ ಧರಿಸಿ ಬರುವರಂತೆ. ಅಲ್ಲಿ ಗೂಳಿಗಿಂತ ಹಿಟ್ಟು ಅಪಾಯಕಾರಿ ಇರಬಹುದು.

ನೋಯ್ಡಾದಲ್ಲಿ ಈ ವ್ಯಕ್ತಿ ಪಾದಚಾರಿ ಮಾರ್ಗದಲ್ಲಿ ಲ್ಯಾಪ್‌ಟಾಪ್‌ನಲ್ಲಿ ತನ್ಮಯನಾಗಿರುವ ಚಿತ್ರ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಸಾಫ್ಟ್‌ವೇರ್ ಎಂಜಿನಿಯರ್.. ಕಚೇರಿಯ ಕೆಲಸ ಮುಗಿಸಲು ಪಾದಚಾರಿ ಮಾರ್ಗದಲ್ಲಿ ಕುಳಿತುಕೊಂಡಿದ್ದಾನೆ.. ಎಂದೆಲ್ಲ ಊಹಾಪೋಹಗಳು ಹರಿದು ಬಂದ ನಂತರ ಚಿತ್ರ ಹಾಕಿದವರು ಸ್ಪಷ್ಟನೆ ಕೊಟ್ಟರಂತೆ– ಆತ ಗೇಮ್ಸ್ ಆಡುತ್ತಿದ್ದ ಎಂದು. ಗೇಮ್ಸ್ ಬೀದಿ ಬದಿಯಲ್ಲಿ ಆಡದೆ ಮತ್ತೆಲ್ಲಿ ಆಡಲಿಕ್ಕಾಗುತ್ತದೆ?



ಅಮೆರಿಕಾದಲ್ಲಿ ಅಂತಿಮ ಸಂಸ್ಕಾರ ನಡೆಸುವ ಕಂಪೆನಿಯೊಂದು ಹೊಸ ಸೇವೆ ಶುರು ಮಾಡಿದೆ. ಮೃತದೇಹದ ಮುಂದೆ ಸಂತಾಪ ಸೂಚಿಸುವವರು ಕಾರಿನಲ್ಲೇ ಕೂತು ಸಲ್ಲಿಸಬಹುದಂತೆ. ಕಾರಲ್ಲೇ ಕುಳಿತು ಕಣ್ಣೀರು ಹಾಕಬಹುದಂತೆ. ನೂಕುನುಗ್ಗಲು ಇಷ್ಟಪಡದವರು, ಸಮಯಕ್ಕೆ ಪ್ರಾಶಸ್ತ್ಯ ಕೊಡುವವರಿಗೆ ಈ ಸೌಲಭ್ಯವಂತೆ. ಸಂಚಾರಿ ಸಂತಾಪವೆಂದರೆ ಇದೇ ಇರಬಹುದು.